ಹೊರಗಡೆ ತೋಟಕ್ಕೆ ಹೋಗಿದ್ದಾಗ ಬಚ್ಚಲ ಮನೆಯ ನೀರು ಹರಿದು ಹೋಗುವ ಜಾಗದ ತೆಂಗಿನ ಹೊಂಡದ ಬುಡದಲ್ಲಿ ಏನೋ ಹೊಳೆಯುತ್ತಿದ್ದುದನ್ನು ನೋಡಿದರು. ಪುನಃ ಮನೆಗೆ ಹೋಗಿ ಬ್ಯಾಟರಿ ತಂದು ಅದರ ಬೆಳಕಿನಲ್ಲಿ ಹತ್ತಿರ ಹೋಗಿ ಇಣುಕಿ ನೋಡಿದರೆ ಅದೇ ಉಂಗುರ! ಬಚ್ಚಲ ನೀರಿನೊಂದಿಗೆ ಹರಿದುಕೊಂಡು ಬಂದಿರಬೇಕು. ಅದು ಆ ಕಪ್ಪು ಕೆಸರಿನ ಮಧ್ಯದಲ್ಲಿ ಹುಗಿದು ಹೋಗಿತ್ತು, ಅದನ್ನು ಒಂದು ಕೋಲಿಗೆ ಸಿಕ್ಕಿಸಿ ಹಿಡಿದು ಎತ್ತಿ ನೋಡಿದರು. ಹೌದು ಅದೇ ಉಂಗುರ.

ಮಧ್ಯಾಹ್ನ ನಡೆದ ಒಂದೊಂದು ಘಟನೆಯೂ ಕಣ್ಣಮುಂದೆ ಹಾದುಹೋಯಿತು. ತಾನು ಎಲ್ಲರ ಮುಂದೆ ಎಷ್ಟು ಕಠೋರವಾಗಿ ವರ್ತಿಸಿದೆ ಎಂದು ನೊಂದುಕೊಂಡರು. ಸುತ್ತಲೂ ಕತ್ತಲು ಕವಿಯುತ್ತಿತ್ತು. ಮದುವೆಯ ಮನೆಯಲ್ಲಿ ಮಕ್ಕಳೆಲ್ಲ ಗ್ಯಾಸ್ ಲೈಟಿನ ಬೆಳಕಿನಲ್ಲಿ ಆಡುತ್ತಿದ್ದವು.

ಸೀತಾರಾಮಯ್ಯನಿಗೆ ಏಕೋ ಉಂಗುರ ಸಿಕ್ಕಿದ್ದು ಖುಷಿಯಾಗಲಿಲ್ಲ. ಆದರೂ ಅದನ್ನು ಹೆಂಡತಿಗೆ ತೋರಿಸಲು ಕೂಗಿ ಕರೆಯಬೇಕು ಎನ್ನುವಷ್ಟರಲ್ಲಿ ಯಾರೋ ಒಬ್ಬ ಒಕ್ಕಲು ಆಳು ಅಡಿಕೆ ಸೋಗೆಯ ಸೂಡಿಯನ್ನು ಬೀಸುತ್ತಾ ಅದರ ಬೆಳಕಿನಲ್ಲಿ ಏದುಸಿರು ಬಿಡುತ್ತಾ ಬಂದವನು, 'ಅಯ್ಯಾ, ವೆಂಕಮ್ಮನೋರು ತೀರಿಕೊಂಡರಂತೆ' ಎಂದು ಕೂಗಿ ಸುದ್ದಿ ಮುಟ್ಟಿಸಿದ.

ಸೀತಾರಾಮಯ್ಯನಿಗೆ ತೀರಾ ಆಘಾತವಾಯಿತು. ಈ ಉಂಗುರದಿಂದ ಇಷ್ಟೆಲ್ಲ ಆಯಿತು. ಎಂದು ಅದನ್ನೇ ತದೇಕದೃಷ್ಟಿಯಿಂದ ನೋಡಿದರು. ಇಷ್ಟಕ್ಕೆಲ್ಲ ಕಾರಣ ಆ ಉಂಗುರ, ಅದು ತನಗೆ ಸಿಕ್ಕಲೇ ಇಲ್ಲ ಅಂತ ಮಾಡಿದರೆ? ಅವರು ತಡ ಮಾಡಲಿಲ್ಲ. ಸೀದಾ ಬಾವಿಯ ಕಟ್ಟೆಗೆ ಬಂದು ಉಂಗುರವನ್ನು ತೆಗೆದು ಬಾವಿಗೆ ಎಸೆದುಬಿಟ್ಟರು. ತನ್ನ ತಪ್ಪಿಗೆ ಪ್ರಾಯಶ್ಚಿತವಾಗಲೇ ಬೇಕು ಎಂದು ಹೆಗಲಿನ ಮೇಲಿನ ಪಾಣಿಪಂಚೆಯನ್ನು ಒಮ್ಮೆ ನೆಲಕ್ಕೆ ಕೊಡವಿ ತಲೆಯಡಿ ಮಾಡಿಕೊಂಡು ಏನೋ ಒಂದು ದೃಢನಿಶ್ಚಯಕ್ಕೆ ಬಂದವರಂತೆ ಅಲ್ಲಿಂದಲೇ ವೆಂಕಮ್ಮನ ಮನೆಯತ್ತ ವೇಗವಾಗಿ ನಡೆಯತೊಡಗಿದರು.

## ದಿನೇಶ ಉಪ್ಪೂರ

ಉಡುಪಿ ಜಿಲ್ಲೆಯ ಹಾಲಾಡಿಯವರು. ಪ್ರಸ್ತುತ ಅಂಬಾಗಿಲಿನಲ್ಲಿ ವಾಸ. ಮೆಸ್ಕಾಂನಲ್ಲಿ ಲೆಕ್ಕಾಧಿಕಾರಿಯಾಗಿ ನಿವೃತ್ತರು. ಯಕ್ಷಗಾನ ಅವರ ನೆಚ್ಚಿನ ಕ್ಷೇತ್ರ. 'ಚಂದ್ರನಖಿ' ಹಾಗೂ 'ಶಂಕರನಾರಾಯಣ ಮಹಾತ್ಮೆ' ಎಂಬ ಯಕ್ಷಗಾನ ಪ್ರಸಂಗಗಳನ್ನು ಪ್ರಕಟಿಸಿದ್ದಾರೆ. ಕತೆ, ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.